ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂ.ತೋಇ/ಜೈಕೇ/ಸತೋನಿ(ಹು.ತೋ.ಕ್ಷೇ)/ 14 /2017-18

ತೋಟಗಾರಿಕೆ ಆಯುಕ್ತಾಲಯ
ಜೈವಿಕ ಕೇಂದ್ರ,
ಹುಳಿಮಾವು,ಅಂಚೆಪೆಟ್ಟಿಗೆ ಸಂ:7648
ಬೆಂಗಳೂರು, ದಿನಾಂಕ 22.09.17

# ಟೆಂಡರ್ ಪ್ರಕಟಣೆ

ವಿಷಯ: ಹುಳಿಮಾವು ತೋಟಗಾರಿಕೆ ಕ್ಷೇತ್ರದಲ್ಲಿರುವ ಮಾದರಿ ತೋಟಗಾರಿಕೆ ಕ್ಷೇತ್ರವನ್ನಾಗಿ ಪರಿವರ್ತಿಸಲು ಹೊಸ ತೋಟಗಾರಿಕೆ ಬೆಳೆಗಳ ಗಿಡಗಳ ಪ್ರಾತ್ಯಕ್ಷಿಕೆ ಹಾಗೂ ತಾಯಿ ತಾಕುಗಳನ್ನು ಅಭಿವೃದ್ಧಿ ಪಡಿಸಲು ಕ್ಷೇತ್ರದಲ್ಲಿರುವ ಹಳೆಯ ಇಳುವರಿ **ಗಣನೀಯವಾಗಿ ಕಡಿಮೆಯಾಗಿರುವ** ಮತ್ತು ವಯಸ್ಸಾಗಿರುವ ಅನುಪಯುಕ್ತ ಮರಗಳನ್ನು ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ

(())

ಸಾರ್ವಜನಿಕರಿಗೆ ಮತ್ತು ಮರಗಳ ವ್ಯಾಪಾರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಹುಳಿಮಾವು ತೋಟಗಾರಿಕೆ ಕ್ಷೇತ್ರವನ್ನು ಮಾದರಿ ತೋಟಗಾರಿಕೆ ಕ್ಷೇತ್ರವನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದ್ದು **ಹೊಸ ತೋಟಗಾರಿಕೆ ಬೆಳೆಗಳ ಗಿಡಗಳ ಪ್ರಾತ್ಯಕ್ಷಿಕೆ ಹಾಗೂ ತಾಯಿ ತಾಕುಗಳನ್ನು ಅಭಿವೃದ್ಧಿ ಪಡಿಸಲು ಹಳೆಯ, ಇಳುವರಿ ಗಣನೀಯವಾಗಿ ಕಡಿಮೆಯಾಗಿರುವ ಮತ್ತು ವಯಸ್ಸಾಗಿರುವ ಅನುಪಯುಕ್ತ ಮಾವು (47ಸಂಖ್ಯೆ)** ಮರಗಳನ್ನು ಕೆಳಗೆ ತಿಳಿಸಿರುವ ದಿನಾಂಕ ಮತ್ತು ವೇಳೆಯಲ್ಲಿ ಸಾರ್ವಜನಿಕರ ಸಮಕ್ಷಮದಲ್ಲಿ ಟೆಂಡರ್ ಮೂಲಕ ವಿಲೇವಾರಿ ಮಾಡಲಾಗುವುದು

| ಕ್ರ ಸಂ. | ತೋಟಗಾರಿಕೆ ಕ್ಷೇತ್ರ ಮತ್ತು ಹರಾಜು ನಡೆಯುವ ಸ್ಥಳ | ವಿಲೇವಾರಿ ಮಾಡುವ ಮರಗಳ ಹೆಸರು | ಟಿಂಬರ್/ಸೌದೆ (ಕೆಜಿಗಳಲ್ಲಿ) | ಮರ ಗಳ ಸಂಖ್ಯೆ | ಠೇವಣಿ ಹಣ ರೂ. ಗಳಲ್ಲಿ | ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ | ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ |
|---|---|---|---|---|---|---|---|
| 1. | ಹುಳಿಮಾವು ತೋಟಗಾರಿಕೆ ಕ್ಷೇತ್ರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-76 | ಮಾವು | 25055 | 47 | 5000 | 10.10.2017 ಮದ್ಯಾಹ್ನ 1.00ಗಂಟೆಗೆ | 10.10.2017 ಮದ್ಯಾಹ್ನ3.30 ಗಂಟೆಗೆ |

## ನಿಬಂಧನೆಗಳು:

1. ಈ ಟೆಂಡರ್ ಪ್ರಕ್ರಿಯೆಯನ್ನು ಟೆಂಡರ್ ಮತ್ತು ಬಹಿರಂಗ ಹರಾಜಿನ ಮುಖಾಂತರ ಮೇಲೆ ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದಂದು ನಡೆಸಲಾಗುವುದು.
2. ನಿಗದಿತ ನಮೂನೆಯಲ್ಲಿ ಮುದ್ರಿತವಾಗಿರುವ ನೋಂದಾಯಿತ ಟೆಂಡರ್ ಫಾರಂಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು, ಹುಳಿಮಾವು ತೋಟಗಾರಿಕೆ ಕ್ಷೇತ್ರ ರವರನ್ನು ಕಛೇರಿವೇಳೆಯಲ್ಲಿ

ದಿನಾಂಕ.26.09.2017 ರಿಂದ 10.10.2017ರವರೆಗೆ **ರೂ. 25.00/-** ಗಳ ಮೊತ್ತವನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ.

3. ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ನಿಗದಿಪಡಿಸಿದ ಠೇವಣಿ ಮೊತ್ತ ಮತ್ತು ನಮೂದಿಸಿರುವ ಟೆಂಡರ್ ಮೊತ್ತದ ಶೇ.50 ರ ಭಾಗದ ಮೊತ್ತವನ್ನು ಪ್ರತ್ಯೇಕವಾಗಿ ಯಾವುದೇ ರಾಷ್ಟ್ರೀಕೃತ ಬ್ಯಾಂಕನಿಂದ ಡಿ.ಡಿ ಮೂಲಕ KSHDA, Bangalore ರವರ ಹೆಸರಿನಲ್ಲಿ ಪಡೆದು ಭರ್ತಿ ಮಾಡಿದ ಟೆಂಡರ್ ಫಾರಂನೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಮೊಹರು ಮಾಡಿದ ಲಕೋಟೆಯಲ್ಲಿ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯಲ್ಲಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು ಹಾಗೂ ಸ್ವೀಕೃತಿ ಪಡೆಯುವುದು ಹಾಗೂ ಅನುಮೋದನೆಯಾದ ದಿನಾಂಕದಿಂದ 7 ದಿನದೊಳಗಾಗಿ ಉಳಿಕೆ ಶೇ.50% ಬಿಡ್ಡು ಮೊತ್ತದ ಪೂರ್ತಿ ಹಣವನ್ನು ಡಿಡಿ ರೂಪದಲ್ಲಿ ಪಾವತಿಸಿ ಮರಗಳನ್ನು ಪಡೆಯಬಹುದಾಗಿರುತ್ತದೆ.

4. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚಿಸುವ ಸಾರ್ವಜನಿಕರು/ ಮರಗಳ ವ್ಯಾಪಾರಿಗಳು ಕಡ್ಡಾಯವಾಗಿ ಶೇ.50% ಬಿಡ್ಡು ಮೊತ್ತ ಮತ್ತು ನಿಯಮಗಳ ಪ್ರಕಾರ ಎಲ್ಲಾ **ತೆರಿಗೆ**ಗಳನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಹಣವನ್ನು ಡಿಡಿರೂಪದಲ್ಲಿ ಸ್ಥಳದಲ್ಲಿಯೇ ಆದಿನವೇ ಪಾವತಿಸಬೇಕು ಅನ್ವಯವಾಗುವ ಎಲ್ಲಾತೆರಿಗೆಗಳಿಗು ಹಾಗೂ ಮಾರಾಟ ಮೌಲ್ಯಕ್ಕು ಪ್ರತ್ಯೇಕವಾಗಿ ಡಿಡಿಯನ್ನು ನೀಡತಕ್ಕದು

5. ಟೆಂಡರ್ ಫಾರಂನಲ್ಲಿ ಹೆಸರು, ವಿಳಾಸ, ನಮೂದಿಸುವ ಟೆಂಡರ್ ಮೊತ್ತ( ಎಲ್ಲಾ ವೆಚ್ಚಗಳು ಸೇರಿ), ಡಿಡಿ ಸಂಖ್ಯೆಗಳನ್ನು ಕಡ್ಡಾಯವಾಗಿ ದಾಖಲಿಸಬೇಕು ಇಲ್ಲದಿದ್ದಲ್ಲಿ ಅಪೂರ್ಣ ಟೆಂಡರುಗಳನ್ನು ತಿರಸ್ಕರಿಸಲಾಗುವುದು. ಹೆಸರು, ವಿಳಾಸದ ಒಂದು ದಾಖಲೆ ಪ್ರತಿ ಒದಗಿಸಬೇಕು(ಆದಾರ್ ಕಾರ್ಡ್, ಓಟರ್ ಐಡಿ ಇತ್ಯಾದಿ..) ಭರ್ತಿ ಮಾಡಿದ ಟೆಂಡರ್ ಫಾರಂ ಮತ್ತು ಡಿಡಿಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿಯೇ ನಿಗದಿತ ದಿನಾಂಕ10.10.17 ಮತ್ತು ಮದ್ಯಾಹ್ನ 1.00ರೊಳಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು, ಹುಳಿಮಾವು ತೋಟಗಾರಿಕೆ ಕ್ಷೇತ್ರ ಕಛೇರಿಯಲ್ಲಿರುವ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು .ನಿಗದಿತ ಅವಧಿ ಮೀರಿದ ಮೇಲೆ ಬಂದ ಟೆಂಡರ್ಗಳನ್ನು ಸ್ವೀಕರಿಸಲಾಗುವುದಿಲ್ಲ

6. ಬಹಿರಂಗ ಹರಾಜನ್ನು ದಿನಾಂಕ 10.10.2017 ರಂದು ಸಂಜೆ 3.30ಕ್ಕೆ ಮೇಲ್ಕಂಡ ವಿಳಾಸದಲ್ಲಿ ಟೆಂಡರ್ದಾರರ ಸಮ್ಮುಖದಲ್ಲಿ ನೆಡಸಲಾಗುವುದು

7. ಕಪ್ಪು ಪಟ್ಟಿಯಲ್ಲಿ ಸೇರಿಸಿರುವ ಮತ್ತು ಮೈನರ್ ಗಳು ಟೆಂಡರ್ ಕಂ ಹರಾಜಿನಲ್ಲಿ ಬಾಗವಹಿಸುವಂತಿಲ್ಲ.

8. ಟೆಂಡರು ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಕ್ಷೇತ್ರದಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಿರುವ ಮರಗಳನ್ನು ಪೂರ್ತಿಯಾಗಿ ವೀಕ್ಷಿಸಿ ಮರದ ಪ್ರಮಾಣ ಮತ್ತು ಮೌಲ್ಯವನ್ನು ಅಂದಾಜಿಸಿ ಟೆಂಡರಿನಲ್ಲಿ ಭಾಗವಹಿಸಬೇಕು.

9. ಟೆಂಡರ್ದಾರರು ಕಂ ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ನಾಟ/ಸೌದೆಯನ್ನು ಅರಣ್ಯ ಇಲಾಖೆಯ ರಹದಾರಿಯನ್ನು ಸಂಬಂಧಪಟ್ಟ ವಲಯ ಅರಣ್ಯಧಿಕಾರಿ,ಬಿಬಿಎಂಪಿರವರಿಂದ ಪಡೆದು ಸಾಗಾಣಿಕೆ ಮಾಡಬೇಕು. ಹಾಗೂ ಹರಾಜು ನೆಡೆದ 10 ದಿನದೊಳಗೆ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಯಾವುದೇ ನೋಟಿಸು ನೀಡದೆ ನಿಯಮಗಳನ್ವಯ ಮುಂದಿನ ಕ್ರಮ ಜರುಗಿಸಲಾಗುವುದು .

10. ಯಶಸ್ವಿ ಟೆಂಡರುದಾರರು ಮತ್ತೊಬ್ಬರಿಗೆ ಸಬ್‌ಲೀಸ್ ಮಾಡಬಾರದು. ಈ ರೀತಿಯ ಅನಧಿಕೃತ ವ್ಯವಹಾರಗಳು ಕಂಡು ಬಂದಲ್ಲಿ ಟೆಂಡರುದಾರರರು ಪಾವತಿಸಿರುವ ಪೂರ್ತಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ನಿಯಮಾನುಸಾರ ಕ್ರಮ ಜರುಗಿಸಿ ಮತ್ತೊಬ್ಬ ಟೆಂಡರುದಾರರಿಗೆ ಅಧಿಕೃತವಾಗಿ ವಿಲೇವಾರಿ ಮಾಡಲಾಗುವುದು.

11. ಅತಿ ಹೆಚ್ಚು ಮೊತ್ತವನ್ನು ನಮೂದಿಸಿರುವ ಹಾಗೂ ಸಮರ್ಪಕ ದಾಖಲಾತಿಗಳನ್ನು ಸಲ್ಲಿಸಿರುವ ಯಶಸ್ವಿ ಟೆಂಡರುದಾರರಿಗೆ ನಮೂದಿಸಿರುವ ಟೆಂಡರ್ ಮೊತ್ತದ ಮೇಲೆ **ಅರಣ್ಯಾಭಿವೃದ್ಧಿ ತೆರಿಗೆ 12 %** , ಟೆಂಡರ್

ಮೊತ್ತ+ ಅರಣ್ಯಾಭಿವೃದ್ಧಿ ತೆರಿಗೆ ಮೊತ್ತದ ಮೇಲೆ 2.5% Income tax, Income tax ಮೊತ್ತದ ಮೇಲೆ 10% cess, ಹಾಗೂ 3% **education cess ಹಾಗೂ ಚಾಲ್ತಿಯಲ್ಲಿರುವ ಇನ್ನಿತರ ತೆರಿಗೆ ಮತ್ತು ಶುಲ್ಕಗಳನ್ನು** ಸರ್ಕಾರಕ್ಕೆ ಪಾವತಿಸಬೇಕು. ಯಾವುದಾದರು ಐಟಂ ಮೇಲೆ ತೆರಿಗೆ ವಿನಾಯ್ತಿ ಇದ್ದಲ್ಲಿ ಸೂಕ್ತ ದಾಖಲಾತಿಗಳನ್ನು ಒದಗಿಸಿದಲ್ಲಿ ಅಂತಹ ತೆರಿಗೆಯಿಂದ ವಿನಾಯ್ತಿ ನೀಡಲಾಗುವುದು.

12. ಟೆಂಡರ್‌ನ್ನು ಕಂಪನಿಯ ವತಿಯಿಂದ ಸಂಘ ಸಂಸ್ಥೆಯಿಂದ/ಸಂಘ ಸಂಸ್ಥೆಗಳು ಕೊಡುವ ಪಕ್ಷದಲ್ಲಿ
    ಅ)ಕಂಪನಿಯ/ಸಂಘ /ಸಂಘ ಸಂಸ್ಥೆಗಳ ನೊಂದಾಯಿತ ಸಂಸ್ಥೆಗಳಾಗಿರಬೇಕು
    ಆ)ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾದ್ಯವಿಲ್ಲದಲ್ಲಿ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರವನ್ನು ಪಡೆದುಕೊಂಡಿರಬೇಕು ಇದನ್ನು ಟೆಂಡರ್‌ಗೆ ಲಗತ್ತಿಸಬೇಕು.

13. ಮರಗಳನ್ನು ಕಡಿಯುವಾಗ ಕ್ಷೇತ್ರದಲ್ಲಿನ ಇನ್ನಿತರೇ ಇಲಾಖೆಯ ಯಾವುದೇ ಸಂಪತ್ತಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು ಟೆಂಡರನ್ನು ರೂಡಿಸಿಕೊಳ್ಳುವವರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಹಾನಿಯುಂಟಾದಲ್ಲಿ ಟೆಂಡರುದಾರರೇ ಪೂರ್ಣ ಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ಸಂಭವಿಸಿದ ನಷ್ಟವನ್ನು ಸದರಿಯವರಿಂದಲೇ ವಸೂಲಿ ಮಾಡಲಾಗುವುದು.

14. ಟೆಂಡರನ್ನು ರೂಡಿಸಿಕೊಳ್ಳುವ ಟೆಂಡರುದರರು ಅರಣ್ಯ ಇಲಾಖೆಯ ಎಲ್ಲಾ ನಿಯಮಾಳಿಗೆ ಸಂಪೂರ್ಣ ಬದ್ಧರಾಗಿರಬೇಕು.

15. .ನಿಗದಿಪಡಿಸಿದ ದಿನಾಂಕಗಳಂದು ಕಾರಾಣಾಂತರದಿಂದ ಟೆಂಡರ್ ನೆಡೆಯದಿದ್ದಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ಹಿಂಪಡೆಯುವ ಅಥವಾ ಮುಂದೂಡುವ ಅಧಿಕಾರ ಈ ಕೆಳಸಹಿದಾರರಿಗಿರುತ್ತದೆ.

16. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ಅವಕಾಶವಿರುವುದಿಲ್ಲ ಹಾಗೂ ಹರಾಜನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಹಕ್ಕು ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. ಇಲಾಖಾ ಅಧಿಕಾರಿಗಳ ತೀರ್ಮಾನವೇ ಅಂತಿಮವಾಗಿರುತ್ತದೆ.

17. ಹೆಚ್ಚಿನ ವಿವರಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು, ಹುಳಿಮಾವು ತೋಟಗಾರಿಕೆ ಕ್ಷೇತ್ರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಾಯಕ ತೋಟಗಾರಿಕೆ ನಿರ್ದೇಶಕರು
ಹುಳಿಮಾವು ತೋಟಗಾರಿಕೆ ಕ್ಷೇತ್ರ